ಎಸ್. ಆರ್. ಜನಾರ್ಧನ್, ಬಿನ್ ಎಸ್. ಎಂ. ರುದ್ರಪ್ಪ,
೨೬ ವರ್ಷ, ನಂ. ೧೫೯೮೪೪, ೨೭ನೇ ಎ ಕ್ರಾಸ್, ಎಡಿಯೂರು, ೬ನೇ ಬ್ಲಾಕ್, ಜಯನಗರ
ಬೆಂಗಳೂರು.

ಶೇ. ಬೊ. ರಾಧಾಕೃಷ್ಣ, ಬಿನ್ ಬೊ. ಲಿಯಪ್ಪ,
೨೫ ವರ್ಷ, ನಂ. ೬೦೪, ಮೊದಲನೇ ಇ ಆಡ್ಡರಸ್ಟೆ, ಮತ್ತೀಕೆರೆ, ಬೆಂಗಳೂರು.

ಅಶೋಕ ಬಿನ್ ರಾಮಣ್ಣ,
೨೨ ವರ್ಷ, ನಂ. ೨೦, ೬ನೇ ಕ್ರಾಸ್, ಗಾಂಧೀನಗರ, ಬೆಂಗಳೂರು.
ಎಂ. ಸಿ. ಕೆ. ಮೂರ್ತಿ, ಬಿನ್ ಮುನಿರಾಜು,
ವಯಸ್ಸು ೨೬, ನಂ. ೮೧, ೧೨ನೇ ಮುಖ್ಯರಸ್ತೆ, ಮತ್ತೀಕೆರೆ, ಬೆಂಗಳೂರು.
ರಾಜು ಬಿನ್ ರಾಮು,
೨೪ ವರ್ಷ, ನಂ. ೬೦೩, ೩ನೇ ಮುಖ್ಯ ರಸ್ತೆ, ೧ನೇ ಕ್ರಾಸ್, ಮತ್ತೀಕೆರೆ, ಬೆಂಗಳೂರು.

ಮೇಲ್ಕಂಡ ವ್ಯಕ್ತಿಗಳು ಪ್ರೇಕ್ಷಕರ ವೇದಿಕೆಯಲ್ಲಿ ತೀವ್ರತರವಾದಂಥ ಅವಿವೇಕ ವರ್ತನೆಯಿಂದ ಘೋಷಣೆಗಳನ್ನು ಕೂಗುತ್ತಾ ಕರಪತ್ರಗಳನ್ನು ಎಸೆದುದಕ್ಕಾಗಿ ಪಹರೆ ಮತ್ತು ನಿಗಾವಣೆ ಸಿಬ್ಬಂದಿಯವರು ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಅವರನ್ನು ಬಂಧಿಸಿ ಹೊರಗಡೆ ಕರೆದುಕೊಂಡು ಹೋಗಲು ಪ್ರಯತ್ನಿಸಿದಾಗ ಅದನ್ನು ತೀವ್ರವಾಗಿ ಪ್ರತಿಭಟಿಸಿ, ತೀವ್ರ ಸ್ವರೂಪದ ಬಲ ಪ್ರಯೋಗ ಮಾಡಿ ಸಿಬ್ಬಂದಿ ಪೇದೆ ಸಂಖ್ಯೆ ೧೭೮೫, ಇವರಿಗೆ ರಕ್ತಗಾಯ ಮಾಡಿದ್ದಾರೆ. ಈ ವ್ಯಕ್ತಿಗಳಿಗೆ ಶಾಸಕರಾದಂಥ ಶ್ರೀ ಪಟ್ಟಣ ಶೆಟ್ಟಿ, ಬೀದರ್ ಜಿಲ್ಲೆ, ಶ್ರೀ ಎಸ್. ಎಸ್. ಕೌಜಲಗಿ ಬೆಳಗಾವಿ ಜಿಲ್ಲೆ, ಹಾಗೂ ಶ್ರೀ ಹನುಮೇಗೌಡ ಹಾಸನ ಜಿಲ್ಲೆ ಇವರ ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸು ಮಾಡಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ.

ಇಂಥ ವ್ಯಕ್ತಿಗಳಿಗೆ ಇನ್ನು ಮುಂದೆ ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸನ್ನು ಮಾಡುವ ಮಾನ್ಯ ಸದಸ್ಯರುಗಳು ಇಂಥ ಘಟನೆಗಳಿಗೆ ಅವಕಾಶ ಕೊಡದಂತೆ ಎಚ್ಚರವಹಿಸಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳಿಗೂ ವಿನಂತಿಸುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ (ಮುಖ್ಯ ಸಚೇತಕರು) —ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ನಿರ್ಣಯವನ್ನು ನಾನು ಈ ಸದನದಲ್ಲಿ ಮಂಡಿಸುತ್ತಾ ಇದ್ದೇನೆ. ಶ್ರೀಯುತರುಗಳಾದ ಗುರುಪ್ರಸಾದ್ ರಾಮೇಗೌಡ, ನಾರಾಜ, ರಾಧಾಕೃಷ್ಣ, ಎಂ.ಸಿ.ಕೆ. ಮೂರ್ತಿ, ಶ್ರೀನಿವಾಸಮೂರ್ತಿ, ರಾಜು, ಅಲೋಕ, ರಘುನಾಥ್ ಎ. ಕೆ. ಆರ್ ಜಗನ್ನಾಥ್ ಇವರುಗಳು ಬೆಳಗಾವಿ ನಗರಸಭೆಯ ಕಟ್ಟಡದ ಮೇಲೆ ಎಂ.ಇ.ಎಸ್. ಧ್ವಜವನ್ನು ಕೆಳಗಿಳಿಸಬೇಕೆಂದು ಘೋಷಣೆ ಕೂಗುತ್ತಾ ಕರಪತ್ರಗಳನ್ನು ಈ ದಿನ ಬೆಳಿಗ್ಗೆ ೧೧-೩೫ ಘಂಟೆಯಲ್ಲಿ ಎಸೆದು ಸಭಾಕಲಾಪಗಳು ನಡೆಯುವಂತೆ ಮಾಡಿದ್ದಾರೆ. ಸದನದ ಪಹರೆ ಮತ್ತು ನಿಗಾವಣೆ ಸಿಬ್ಬಂದಿಯವರು ಇವರುಗಳನ್ನು ಬಂಧಿಸಿ ಹೊರಗಡೆ ಕರೆದುಕೊಂಡು ಹೋಗಲು ಪ್ರಯತ್ನಿಸಿದಾಗ ಅದನ್ನು ತೀವ್ರವಾಗಿ ಪ್ರತಿಭಟಿಸಿ ತೀವ್ರ ಸ್ವರೂಪದ ಬಲ ಪ್ರಯೋಗ ಮಾಡಿ ಸಿಬ್ಬಂದಿ ಪೇದೆ ಸಂಖ್ಯೆ ೧೭೮೫, ಇವರಿಗೆ ರಕ್ತ ಬರುವಂತೆ ಮಾಡಿದ್ದಾರೆ. ಇದು ಗುರುತರವಾದ ಅಪರಾಧ ಹಾಗೂ ಸದನಕ್ಕೆ ಅಗೌರವ ತಂದಂತಾಗಿದೆ. ಸದನದ ಪಹರೆ ಹಾಗೂ ನಿಗಾ ಸಿಬ್ಬಂದಿಯವರು ಮೇಲ್ಕಂಡವರನ್ನು ಬಂಧಿಸಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮೇಲ್ಕಂಡವರಿಗೆಲ್ಲಾ ಮೂರು ದಿನಗಳ ಸಾದಾ ಶಿಕ್ಷೆಯನ್ನು ವಿಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಕಳುಹಿಸಬೇಕೆಂದು ಈ ಸದನದಲ್ಲಿ ನಿರ್ಣಯವನ್ನು ಮಂಡಿಸುತ್ತೇನೆ.

೬—೨೦ ಪಿ. ಎಂ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ವಿರೋಧಿಸಿ, ಕೆಲವು ಮಾತುಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಬೆಳಗಾವಿಯಲ್ಲಿರತಕ್ಕ ಪರಿಸ್ಥಿತಿಯನ್ನು, ಬೆಳಗಾವಿ ನಗರ ಸಭೆಯ ಚುನಾವಣೆಯನ್ನು ವಿರೋಧಿಸಲಿಕ್ಕಾಗಿ ಬಂದು ಮತ್ತು ಬೆಳಗಾವಿ ನಗರ ಸಭೆಯ ಮೇಲಿರುವ ಮರಾಠಿ ಧ್ವಜವನ್ನು ತೆಗೆಯಬೇಕೆಂದೂ, ಮತ್ತು ಈ ಸರೋಜಿನಿ ಮಹಿಷಿಯ ವರದಿಯನ್ನು ಒಪ್ಪಬೇಕೆಂದು ಹೇಳಿ, ಸಮಗ್ರವಾಗಿ ಒತ್ತಾಯ ಮಾಡಲು ಬೆಳಗಾವಿ ನಗರದಿಂದ ಸುಮಾರು ೬೫೦ ಕಿ. ಮೀ. ದೂರದಿಂದ, ತಮ್ಮ ತಮ್ಮ ಬುತ್ತಿಗಳನ್ನು ಕಟ್ಟಿಕೊಂಡು ಕನ್ನಡದ ಅಭಿಮಾನದಿಂದ ಈ ಊರಿಗೆ ಸತ್ಯಾಗ್ರಹ ಮಾಡಲು ಬಂದಿದ್ದಾರೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದೇ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಹತ್ತಾರು ಜನ ಕನ್ನಡದಲ್ಲಿರವಾಗಿ

ಬೆಳಗಾವಿ ನಗರ ಸಭೆಯ ಮೇಲೆ ಇರುವ ಭಾವುಟವನ್ನು ತೆಗೆಯಬೇಕೆಂದು ಘೋಷಣೆ ಕೂಗಿದ್ದಾರೆ. ನಾನಾದರೂ ಈ ವಿಚಾರವನ್ನು ಒಂದು ಅಭಿಮಾನದಿಂದ ಕೆಲವರು ಘೋಷಣೆಗಳನ್ನು ಕೂಗಿದ್ದಾರೆಂದು ತಮ್ಮ ಗಮನಕ್ಕೆ ತರುತ್ತೇನೆ. ಅವರಿಗೆ ಕೊಟ್ಟಿರತಕ್ಕ ಶಿಕ್ಷೆ ಮೂರು ದಿವಸಗಳ ಕಾರಾಗೃಹಕ್ಕೆ ಕಳುಹಿಸತಕ್ಕಂಥಾದ್ದು ಬಹಳ ಜಾಸ್ತಿ ಆಯಿತು. ಆ ಶಿಕ್ಷೆಯನ್ನು ತಾವು ಮತಕ್ಕೆ ಹಾಕುವುದಕ್ಕೆ ಮುಂಚೆ ಅದು ತಮ್ಮ ನಿರ್ಧಾರಕ್ಕೆ ಬಿಟ್ಟಿದ್ದು, ನಾನು ಸರ್ಕಾರಕ್ಕೂ ಹೇಳುತ್ತೇನೆ, ಮೂರು ದಿವಸ ಕಾರಾಗೃಹಕ್ಕೆ ಬದಲು ಒಂದು ಸಲಹೆ ಮಾಡಿ, ಮುಂದೆ ಆ ರೀತಿ ಮಾಡಬಾರದು ಎನ್ನತಕ್ಕ ಸಲಹೆ ಮಾಡಿ ಅಷ್ಟಕ್ಕೆ ಇಳಿಸಬೇಕೆಂದು ನಿಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಅವರು ಯಾವರೀತಿ ವರ್ತನೆ ಮಾಡಿದರು ಎನ್ನುವ ಪ್ರಶ್ನೆಗಿಂತ, ಕನ್ನಡದ ಅಭಿಮಾನದಿಂದ ಮಾಡಿದ್ದಾರೆಂಬುದನ್ನು ಮನಗಂಡು, ಅವರಿಗೆ ಶಿಕ್ಷೆಯನ್ನು ವಿಧಿಸಬಾರದೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ. ಅವರು ಎಲ್ಲರೂ ಯುವಕರಿದ್ದಾರೆ ಸಭೆಯ ಕಲಾಪವನ್ನು ಕೆಡಿಸಬೇಕೆಂದಾಗಲೀ. ಈ ಸಭೆಗೆ ಅಗೌರವ ಮಾಡಬೇಕೆಂದುದಾಗಲೀ ಅವರ ಉದ್ದೇಶವಲ್ಲ. ಅವರು ಮಸೆದ ಕಾಗದ ಪತ್ರಗಳಿಂದ ಈ ಸದನದ ಘನತೆ ಗೌರವಕ್ಕೆ ಧಕ್ಕೆ ತರುವ ಉದ್ದೇಶವೂ ಕೂಡ ಖಂಡಿತವಾಗಿ ಅವರಿಗೆ ಇರಲಿಲ್ಲವೆಂದು ನಾನಾದರೂ ಅಂದುಕೊಂಡಿದ್ದೇನೆ. ಅಂಥ ಒಂದು ಉದ್ದೇಶವನ್ನೇ ಹೊಂದಿದ್ದಾರೆಂದು ತಮಗೆ ಅನ್ನಿಸಿದರೆ ಏನು ಶಿಕ್ಷೆ ಬೇಕಾದರೂ ಮಾಡಿ. ಕನ್ನಡದ ಅಭಿಮಾನದಿಂದ ಘೋಷಣೆಗಳನ್ನು ಕೂಗಿದ್ದಾರೆ ತಾವು ಅದಕ್ಕಾಗಿ ಮನ್ನಿಸಬೇಕು, ನನ್ನ ಮನವಿಯ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ, ಕಾರಾಗೃಹಕ್ಕೆ ಕಳುಹಿಸುವುದಂ ಸಾಧುವಲ್ಲ. ಅಧ್ಯಕ್ಷರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಅವರು ಪತ್ರಗಳನ್ನು ಎಸೆದಿರುವುದು ತಮ್ಮ ವಿರುದ್ಧವಾಗಲೀ ಅಲ್ಲ. ಸಭೆಯ ವಿರುದ್ಧವಾಗೀ ಸಭೆಯಲ್ಲಿ ಆ ರೀತಿ ಪತ್ರಗಳನ್ನು ಎಸೆಯಬಾರದು ಕಲಾಪಕ್ಕೆ ಅಡ್ಡಿಪಡಿಸಬಾರದು ಎಂಬ ಬಗ್ಗೆ ಸಭೆಯಲ್ಲಿ ವಿಧಿನಿಯಮಗಳು ಇವೆ ಎನ್ನುವುದು ಅವರಿಗೆ ಗೊತ್ತಿಲ್ಲ. ಅವರೂ ಎಲ್ಲರೂ ಯುವಕರಿರುವುದರಿಂದ ಅವರಿಗೆ ಇಂತಹ ದೊಡ್ಡ ಶಿಕ್ಷೆಯಂನ್ನು ವಿಧಿಸಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಸಭಾಧ್ಯಕ್ಷರೇ, ಪ್ರಜಾತಂತ್ರ ಪದ್ಧತಿಯಲ್ಲಿ ಪ್ರಜಾತಂತ್ರ ಯಶಸ್ವಿ ಆಗಬೇಕಾದರೆ ಹಿಂಸೆಗೆ ಅವಕಾಶ ಇರಕೂಡದು. ಹಿಂಸೆಗೆ ನಾವು ಅವಕಾಶವನ್ನು ಮಾಡಿಕೊಟ್ಟರೆ ಪ್ರಜಾತಂತ್ರದ ವ್ಯವಸ್ಥೆ ಸರಿಹೋಗುವುದಿಲ್ಲವೆಂಬುದು ನಮ್ಮೆಲ್ಲರಿಗೂ ತಿಳಿದಿರುವಂತಹ ವಿಷಯ. ಆದರಲ್ಲಿಯೂ ಈ ಸದನ ಇಡೀ ರಾಜ್ಯಕ್ಕೆ ಸಾರ್ವಭೌಮತ್ವವನ್ನು ಹೊಂದಿರತಕ್ಕದ್ದಾಗಿದೆ. ರಾಜ್ಯದ ಜನರ ಭಾವನೆಗಳನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ, ಅವರ ದುಃಖ, ದುಮ್ಮಾನಗಳನ್ನು ಪರಿಗಣನೆ ಮಾಡುವುದಕ್ಕೆ ಸೇರತಕ್ಕಂತಹ ಒಂದು ಸಾರ್ವಭೌಮ ಸಭೆ ಇದು, ಈ ಸಭೆಯಲ್ಲಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಆಗಲಿ ಅಥವಾ ಬೇರೆ ಗ್ಯಾಲರಿಗಳಲ್ಲಾಗಲೀ ಅಥವಾ ನಾವು ಸದನದ ಸದಸ್ಯರಾಗಿ ಆವೇಶಕ್ಕೆ ಒಳಗಾಗಿ ಹಿಂಸಾಕೃತ್ಯಕ್ಕೆ ಇಳಿದಾಗ ಬಹುಶಃ ನಾವು ಪ್ರಜಾತಂತ್ರದ ವ್ಯವಸ್ಥೆಗೆ ಒಂದು ಚ್ಯುತಿಯನ್ನು ತರುತ್ತೇವೆ. ಆ ದೃಷ್ಟಿಯಿಂದಾಗಿ ಇವೊತ್ತು ನಮ್ಮ ಯುವಕ ಮಿತ್ರರು ಮಾಡಿರತಕ್ಕದ್ದು ತಪ್ಪು. ಅದು ನಮ್ಮ ಭಾವನೆಗಳನ್ನು, ನಿಮ್ಮ ಭಾವನೆಗಳನ್ನು ಸರ್ಕಾರದ ಭಾವನೆಗಳನ್ನು ಸಹಿತ ಈ ಒಂದಂ ನಿರ್ಣಯದಲ್ಲಿ ಅಡಕ ಮಾಡಲಾಗಿದೆ. ಆದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಒಂದೇ ಒಂದು ಮನವಿಯನ್ನು ನಾನು ತಮ್ಮಲ್ಲಿ ವಿರೋಧ ಪಕ್ಷದವರ ಪರವಾಗಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಯುವಕರು ಮಾಡಿದ್ದು ತಪ್ಪು. ಆದರೆ ಅವರ ಭಾವನೆ ಏನು ಇದೆ, ಕನ್ನಡದ ಬಗ್ಗೆ ಅಭಿಮಾನ ಹೊಂದಿ, ಆ ದೃಷ್ಟಿಯಿಂದ ಕರಪತ್ರಗಳನ್ನು ಹಾಕಿ ಘೋಷಣೆಗಳನ್ನು ಕೂಗಿದ್ದಾರೆ. ಆದರೆ ಅವರು ಹಿಂಸಾಕೃತ್ಯಕ್ಕೆ ಇಳಿದದ್ದು ತೀರ ಖಂಡನೀಯ. ಅದು ನಿಸ್ಸಂಶಯ ತಾವು ಕೊಟ್ಟಿರತಕ್ಕ ಶಿಕ್ಷೆ.

ಅಧ್ಯಕ್ಷರು.—ಇನ್ನೂ ಕೊಟ್ಟಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದರೆ ನಿರ್ಣಯದಲ್ಲಿ ಸೂಚನೆ ಮಾಡಿರತಕ್ಕ ಶಿಕ್ಷೆ, ಅದು ಸ್ವಲ್ಪ ಜಾಸ್ತಿ ಆಯಿತು ಎನಿಸುತ್ತದೆ. ತಾವು ದಯವಿಟ್ಟು ಈ ಶಿಕ್ಷೆಯಂನ್ನು ಕಡಿಮೆ ಮಾಡಬೇಕು. ನಾನು ಸರ್ಕಾರದವರಿಗೂ ಮನವಿ ಮಾಡಿಕೊಳ್ಳುತ್ತೇನೆ, ಮೂರು ದಿವಸದ ಬದಲು ತಾವು ಎಚ್ಚರಿಕೆ ನೀಡಿ ಬಿಡತಕ್ಕದ್ದು ಸೂಕ್ತವಾಗಿದೆ. ಏಕಸ್ಮಾತ್ತಾಗಿ ಶಿಕ್ಷೆ ಕೊಡಲೇಬೇಕು ಎಂದು ಸರ್ಕಾರದ ನಿರ್ಧಾರ ಆಗಿದ್ದರೆ ಇವೊತ್ತು ಸಾಯಂಕಾಲದವರೆಗೆ ಇಟ್ಟಿದ್ದೀರಿ. ಈಗ ಬಿಡಬಹುದು ಎಂದು ಹೇಳುತ್ತೇನೆ. ಇದನ್ನು ತಾವು ದಯವಿಟ್ಟು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಹಾಗೂ ಸರ್ಕಾರದ ನೇತಾರರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ಇವೊತ್ತು ಬೆಳಿಗ್ಗೆ ಆದಂತಹ ಘಟನೆ ನಿಜಕೂ ಈ ಇಡೀ ಸದನದಲ್ಲಿ ಸದನದ ಯಾವ ಸದಸ್ಯರೂ ಒಪ್ಪತಕ್ಕಂಥ ಘಟನೆ ಅಲ್ಲ. ಶ್ರೀ ವಾಟಾಳ್

ನಾಗರಾಜ್‌ರವರು ಶ್ರೀಮಾನ್ ಸಿಂಧ್ಯಾರವರು ಏನು ಈ ನಿರ್ಣಯದ ಬಗ್ಗೆ ಮಾತನಾಡಿದ್ದಾರೆ, ಅದನ್ನು ನಾನು ಕೂಡ ಪುಷ್ಟೀಕರಿಸುತ್ತೇನೆ. ಸಂಬಂಧಪಟ್ಟ ಯುವಕರ ಉತ್ಸಾಹ ಮತ್ತು ಭಾವನೆಯನ್ನು ಅರ್ಥ ಮಾಡಿಕೊಂಡು ಅವರು ಮಾಡಿರತಕ್ಕ ತಪ್ಪಿಗೆ ಎಚ್ಚರಿಕೆಯನ್ನು ಮಾತ್ರ ಕೊಟ್ಟು ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್.—ಸನ್ಮಾನ್ಯ ಸಭಾಧ್ಯಕ್ಷರೇ ಸನ್ಮಾನ್ಯ ವಿಪ್ ಆದ ಶ್ರೀ ವಂಟ್ಲಾರಿ ಗೌಡರು ತಂದಿರತಕ್ಕ ಈ ನಿರ್ಣಯಕ್ಕೆ ನನ್ನ ಸಮ್ಮತಿಯನ್ನು ಬಯಸಿ ಒಂದರಡು ವಿಚಾರಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಮೊಟ್ಟ ಮೊದಲನೆಯದಾಗಿ ಹೇಳಬೇಕಾದರೆ ಆ ಯುವಕರು ಬುತ್ತಿ ಕಟ್ಟಿಕೊಂಡು ಬೆಳಗಾವಿಯಿಂದ ಬಂದಿದ್ದಾರೆ, ಎಂದು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ್ದು ಸುಳ್ಳು. ಏಕೆಂದರೆ ತಾವು ಹೇಳಿರತಕ್ಕ ರೀತಿಯಲ್ಲಿ ನೋಡಿದರೆ ಅವರು ಎಲ್ಲಾ ಬೆಂಗಳೂರಿನವರೇ, ಇವೊತ್ತಿನ ದಿವಸ ನಾವು ಕನ್ನಡಿಗರು, ಕನ್ನಡದ ಬಗ್ಗೆ ಅಭಿಮಾನ ಎಲ್ಲರಿಗೂ ಇದೆ, ಇಟ್ಟುಕೊಂಡಿದ್ದೇವೆ. ಆದರೆ ಕೆಲವು ಸಲ ಕೆಲವು ವ್ಯಕ್ತಿಗಳು ತಮ್ಮ ಒಂದು ಪೌರುಷವನ್ನು ಅಥವಾ ಪೇಪರ್‌ನಲ್ಲಿ ಬರಲಿ ಎನ್ನುವ ಸಲುವಾಗಿ ಎಷ್ಟೋ ಮಂದಿ ಕನ್ನಡದ ಬಗ್ಗೆ ಅಭಿಮಾನ ತೋರಿಸುತ್ತಾರೆ. ಇದರ ಹೊರತಾಗಿ ಬೇರೆ ಅಲ್ಲ. ಹಾಗೆ ನೋಡಿದರೆ ನಾನು ಕನ್ನಡಿಗನಲ್ಲ. ಆದರೆ ಕನ್ನಡದ ಬಗ್ಗೆ ಅಭಿಮಾನ ನನಗೆ ಇಲ್ಲವೇ ? ಕಳೆದ ಸಾರಿ ನಾನಂ ನೋಡಿದ್ದೇನೆ. ಈ ಸದನದಲ್ಲಿ ಎರಡನೇ ಬಾರಿಗೆ ನಾನು ಬಂದಿದ್ದೇನೆ ಎಷ್ಟೋ ಸಲ ೩-೪ ಬಾರಿ ಕಣ್ಣಾರೆ ಕಂಡಿದ್ದೇನೆ. ಅಲ್ಲಿ ಗ್ಯಾಲರಿಯಲ್ಲಿ ಕುಳಿತ ತಕ್ಷಣ ಪತ್ರಿಕೆಯನ್ನು ಹಾರಿಸುವುದು, ಕೂಗಾಡುವುದು ಎಲ್ಲಾ ಮಾಡುತ್ತಿದ್ದಾರೆ. ಆದರೆ ಇವೊತ್ತು ಯುವಕ ಮಿತ್ರರು ಏನು ಮಾಡಿದರು, ಅದು ಹಗುರವಾದ ವಿಚಾರವಲ್ಲ. ಸೆಕ್ಯೂರಿಟಿ ಯವರು ಕರೆದುಕೊಂಡು ಹೋಗುವಾಗ ಸುಮ್ಮನೇ ಇರುವುದನ್ನು ಬಿಟ್ಟು, ತಮ್ಮ ಅಭಿಮಾನವನ್ನು ತೋರಿಸುವುದಕ್ಕೆ ಗಾಯ ಮಾಡಿದ ಕೆಲಸ ತಪ್ಪು. ನಮ್ಮ ವಿಪ್ ಸಾಹೇಬರು ಮೂರು ದಿವಸದ ಶಿಕ್ಷೆ ಎಂದು ಹೇಳಿದರು. ಆದರೆ ಬರುವ ದಿನಗಳಲ್ಲಿ ಎಲ್ಲರಿಗೂ ಈ ಸದನದಲ್ಲಿ ಘನತೆ ಗೌರವಗಳನ್ನು ತೋರಿಸಬೇಕಾದರೆ, ಮೂರು ದಿವಸ ಅಲ್ಲ, ನನ್ನನ್ನು ಕೇಳಿದರೆ ಒಂದು ೧೦ ದಿವಸ ಕಠಿಣ ಶಿಕ್ಷೆ ವಿಧಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೋ. ಎಂ. ಡಿ. ನಂಜುಂಡಸ್ವಾಮಿ.—ಸಭಾಧ್ಯಕ್ಷರನ್ನೂ ಒಳಗೊಂಡಂತೆ ನಾವು ಎಲ್ಲರೂ ಚಳುವಳಿಗಳನ್ನು ಮಾಡಿದವರು ಆದರೂ.....

ಅಧ್ಯಕ್ಷರು.—ಚಳುವಳಿ ಮಾಡಿದ್ದೇವೆ, ಗ್ಯಾಲರಿಯಲ್ಲಿ ಮಾಡಿಲ್ಲ ಹೊರಗಡೆ, ಮಾಡಿದ್ದೇವೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಆದರೂ ಇವೊತ್ತು ನಮ್ಮ ಯುವಕರು ಮಾಡಿರುವ ಕೆಲಸದಲ್ಲಿ ಸ್ವಲ್ಪ ಅಶಿಸ್ತು ಇದೆ. ಆ ಅಶಿಸ್ತನ್ನು ಸರಿಪಡಿಸಿಕೊಳ್ಳಬೇಕೆಂಬ ಬುದ್ದಿವಾದವನ್ನು ಅವರಿಗೆ ಹೇಳಬಹುದು.

ಅವರು ಮಾಡಿರುವಂಥ ಒಂದು ಪ್ರದರ್ಶನಕ್ಕೆ ಸಾಮಾನ್ಯವಾಗಿ ನ್ಯಾಯಾಲಯ ಕೋರ್ಟ್ ಏಳುವವರೆಗೆ ಶಿಕ್ಷೆ ವಿಧಿಸುತ್ತದೆ. ಅದೇ ರೀತಿ ಈ ಸದನ ಏಳುವವರೆಗೆ ಶಿಕ್ಷೆ ವಿಧಿಸಿದರೆ ಸಾಕು. ಈಗಾಗಲೇ ಅವರು ಬಂಧನದಲ್ಲಿದ್ದಾರೆ, ಅಷ್ಟು ಶಿಕ್ಷೆ ಸಾಕು ಎಂದು ನನ್ನ ಅಭಿಪ್ರಾಯ.

† ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇವತ್ತು ಏನು ಘಟನೆ ನಡೆದಿದೆ ಇದು ನಮ್ಮ ಕನ್ನಡಿಗರಿಗೆ ಯಾರಿಗೂ ಶೋಭಾಯಮಾನವಾಗುವುದಿಲ್ಲ. ಏಕೆಂದರೆ, ಇದು ನಮ್ಮ ಕನ್ನಡ ನಾಡಿನಲ್ಲಿ ಒಂದು ಅತ್ಯುನ್ನತವಾದಂಥ ಪೀಠ. ಇದರಲ್ಲಿ ಕೆಲವು ಪರಂಪರೆಗಳಿವೆ, ಇವತ್ತು ಇಡೀ ದೇಶಕ್ಕೆ ಆದರ್ಶಪ್ರಾಯವಾಗಿ ನಾವು ಸಭೆ ನಡೆಸಬೇಕು. ಆದರಿಂದ ಕನ್ನಡಿಗರಿಗೆ ಅಭಿಮಾನ ಇರುತ್ತದೆ, ಕೀರ್ತಿ ಇರುತ್ತದೆ, ಆ ಒಂದು ದೊಡ್ಡ ಪರಂಪರೆಯನ್ನು ದೇಶಕ್ಕೆ ಹಾಕಿಕೊಟ್ಟಂತಾಗುತ್ತದೆ. ಆದರೆ ನಾವು ಈ ಒಂದು ಕನ್ನಡದ ನೆಲದಲ್ಲಿ ಅಶಿಸ್ತಿನ ಒಂದು ತಳಪಾಯವನ್ನು ಸದನದಲ್ಲಿ ಪ್ರಾರಂಭ ಮಾಡಿದರೆ ಎಲ್ಲಿ ಕೊನೆಯಾಗುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಸನ್ಮಾನ್ಯ ವಾಟಾಳ್ ನಾಗರಾಜ್ ರವರು, ಮಾನ್ಯ ಉಪ ಸಭಾಯಕರು, ಡಾ, ನಂಜುಂಡಸ್ವಾಮಿಯವರು, ಮಾನ್ಯ ಉಸ್ತಾದ್‌ರವರು, ಏನು ಹೇಳಿದ್ದಾರೆ, ಇದರಲ್ಲಿ ಎರಡು ಭಾಗ ಇದೆ. ಒಂದನೇ ಭಾಗ ಕನ್ನಡದ ಅಭಿಮಾನ ಉಕ್ಕೇರಿ ಏನೋ ಅಚಾತುರ್ಯ ಮಾಡಿದ್ದಾರೆ ಅಂದರೆ ಅದು ಲೈಸೆನ್ಸ್ ಆಗಬಾರದು. ಈ ಸದನದಿಂದ ಇವತ್ತು ಈ ವಿಚಾರ ನಿರ್ಣಯವಾಗಿ ಶಿಕ್ಷೆ ಕೊಡಬಹುದು ಅಥವಾ ಬಿಡಬಹುದು, ಅದು ಕೊನೆಗೆ ನಮ್ಮ ಸನ್ಮಾನ್ಯ ಅಧ್ಯಕ್ಷರ ಆದೇಶದ ಪ್ರಕಾರ ನಾವು ನಡೆಯೋಣ. ನಾವು ಅವರು ಅಭಿಮಾನದ ಬಗ್ಗೆ ಮೆಚ್ಚೋಣ. ಆದರೆ ಅವರು ಮಾಡಿದಂಥ ಒಂದು ಕೃಮ ತೆಗೆದುಕೊಂಡುಂಥ ಒಂದು ಕೃಮ, ಆಮೇಲೆ ಹಿಂಸಾಚಾರ ಒಳಗಾದದ್ದನ್ನು ತಾವು ಇಲ್ಲಿ ಕಂಡಿದ್ದೀರಿ, ಅವರು ಗಾಜನ್ನು ಹೊಡೆದು ಬಿಟ್ಟಿದ್ದಾರೆ. ಐ ಆಂ ಸಾರಿ

ಇದಕ್ಕೆ ತಾವು ಒಂದು ಶಬ್ದದ ಮೂಲಕ ಖಂಡನೆ ಮಾಡಬೇಕಾಗಿತ್ತು. ಇವತ್ತು ನಮ್ಮ ವಾಚ್ ಅಂಡ್ ವಾರ್ಡ್‌ನವರು ಇದ್ದಾರೆ. ಅವರು ಯಾರ ರಕ್ಷಣೆಗೆ ಇದ್ದಾರೆ. ಈ ಸದನದ ಘನತೆ ಗಾಂಭೀರ್ಯ ಇದೆಲ್ಲಾ ಕಾಯ್ದುಕೊಂಡು ಹೋಗಬೇಕು ಎಂದು ಅವರಿದ್ದಾರೆ. ಅವರ ಬಗ್ಗೆ ನಾವು ಹೀನಾಮಾನವಾಗಿ ವರ್ತಿಸಿದರೆ, ಅವರಿಗೆ ರಕ್ತ ಬರುವ ಹಾಗೆ ಮಾಡಿದರೆ ಬಹುಶಃ ಈ ರೀತಿ ಇದುವರೆಗೆ ಆಗಿಲ್ಲ. ಇದನ್ನು ಬಹಳ ಸಲಿಗೆಯಿಂದ, ಸರಳವಾಗಿ ತೆಗೆದುಕೊಳ್ಳುವುದಲ್ಲ. ದಕ್ಕೆ ಬಂದಿದೆ ಆಲ್‌ರೈಟ್ ಇರಲಿ, ಒಂದು ಸ್ವಲ್ಪ ಗಾಯ ಜಾಸ್ತಿಯಾಗಿದೆ ಇರಲಿ ಈ ದೃಷ್ಟಿಯನ್ನು ಇಟ್ಟುಕೊಂಡು ಇವತ್ತು ಹೋಗಬಾರದು. ನಾನು ತಮ್ಮಿಂದ ಏನು ನಿರೀಕ್ಷೆ ಮಾಡಿದ್ದೆ ಅಂದರೆ ಇವತ್ತು ಅದನ್ನು ಸಂಪೂರ್ಣವಾಗಿ ಬರೀ ಖಂಡನೆ ಮಾಡಿದರೆ ಸಾಲದು ಅಥವಾ ಅಧ್ಯಕ್ಷರು ಮಾಡಿದರೆ ಸಾಲದು, ಒಕ್ಕೊರಲಿನಿಂದ ಇಂತಹ ಘಟನೆ ಇನ್ನು ಮುಂದೆ ಆಗದ ಹಾಗೆ ನೋಡಿಕೊಳ್ಳಬೇಕಾದಂಥ ಜವಾಬ್ದಾರಿ ನಾವೆಲ್ಲಾ ವಹಿಸಬೇಕು. ಈ ಮಾತು ಬಂದಿದ್ದರೆ ಬಹುಶಃ ಈ ಸದನಕ್ಕೆ ಇನ್ನೂ ಹೆಚ್ಚು ಶೋಭೆ ಬರುತ್ತಿತ್ತು. ಮುಂದೆ ನಡೆಯತಕ್ಕ ಯಾವುದೇ ಅಹಿತ ಘಟನೆಗೆ, ಯಾವುದೇ ಒಂದು ಹಿಂಸಾಚಾರಕ್ಕೆ ಬಹುಶಃ ಇದು ತಡೆಯಾಗಬಹುದು. ಇದು ಏನಾಗುತ್ತದೆ ಎಂದರೆ, ಬೋನಸ್ ಪಾಯಿಂಟ್ಸ್ ಸಿಕ್ಕಬಾರದು. ಸರ್ಕಾರದಿಂದ ಒಂದು ನಿರ್ಣಯವನ್ನು ಇವತ್ತು ತಂದಿದ್ದೇವೆ. ಈ ನಿರ್ಣಯವನ್ನು ಮುಂದೆ ಹಾಕುವುದರಿಂದ ಅಥವಾ ಪ್ರತಿಪಕ್ಷದಿಂದ ಈ ನಿರ್ಣಯ ಇವತ್ತು ಪಾಸ್ ಆಗಬೇಕು ಇದು ಮುಖ್ಯವಲ್ಲ. ಆದರೆ ನಿರ್ಣಯದ ಬಗ್ಗೆ ವಿಚಾರ ಅಥವಾ ಮಂಥನವಾಗಿ, ಚರ್ಚೆಯಾದಾಗ, ಅದು ಹೊರಗೆ ಹೋದಾಗ, ಇಲ್ಲಿ ಏನು ಆಶ್ಚರ್ಯ ಮಾಡಿದರೂ, ಏನು ಹಿಂಸಾಚಾರಕ್ಕೆ ಇಳಿದರೂ ಸಿಬ್ಬಂದಿ ಮೇಲೆ ದಾಳಿ ಮಾಡಿದರೂ ರಕ್ಷಣೆ ಮಾಡತಕ್ಕೆ ಜನ ಕೂಡ ಸದನದಲ್ಲಿದ್ದಾರೆ ಎನ್ನತಕ್ಕ ಭಾವನೆ ಕೂಡ ಯಾರಿಗೂ ಬರಬಾರದು. ಈ ಭಾವನೆ ಮಾತ್ರ ದಯವಿಟ್ಟು ಬರಬಾರದು. ಈ ಭಾವನೆ ಬಂದರೆ, ಅವರು ತಿಂಕ್ ಮಾಡುತ್ತಾರೆ, ನಾವು ಏನು ಮಾಡಿದರೂ ಕೂಡ ಡಿಫೆಂಡ್ ಮಾಡತಕ್ಕಂಥ ಜನ ಒಳಗೆ ಇದ್ದಾರೆ ಮತ್ತು ನಮ್ಮ ಸಹಾಯಕ್ಕೆ ಬರುತ್ತಾರೆ ಎಂದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಏಕೆಂದರೆ, ಇದು ತಪ್ಪು ಅಭಿಪ್ರಾಯ, ತಪ್ಪು ಅಭಿಪ್ರಾಯ ನಮ್ಮ ಪಕ್ಷದ ಬಗ್ಗೆ ಬರಬಾರದು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹಿಂಸೆಗೆ ಅವಕಾಶ ಕೊಡಬಾರದು. ಇವತ್ತು ನಮ್ಮ ಯುವಕ ಮಿತ್ರರು ಮಾಡಿರತಕ್ಕಂಥಾದ್ದು ತಪ್ಪು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅವರು ಮಾಡಿದ್ದು ತಪ್ಪು ಎಂದು ಹೇಳಿದ ಮೇಲೆ ಇನ್ನೇನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂತಹ ಒಂದು ಹಿಂಸಾಚಾರವನ್ನು ಪ್ರೋತ್ಸಾಹಿಸದೆ ಇರತಕ್ಕ ಒಂದು ಸಂದೇಶವು ಈ ಸದನದ ಹೊರಗೆ ಹೋಗಬೇಕು. ಇವರೆಲ್ಲರೂ ಬೆಂಗಳೂರಿನವರಾಗಿರುತ್ತಾರೆ. ಈಗ ತಾನೇ ತಾವು ಅವರ ವಿಳಾಸಗಳನ್ನು ಓದಿ ಹೇಳಿದ್ದೀರಿ. ಆದರೂ ಸಹ ಮಾನ್ಯ ವಾಟಾಳ್ ನಾಗರಾಜ್ ಅವರು ಬೆಳಗಾಂನಿಂದ ಬುತ್ತಿ ತೆಗೆದುಕೊಂಡು ಬಂದಿದ್ದಾರೆಂದು ಹೇಳಿದ್ದಕ್ಕೆ ಏನು ಆಧಾರ ?

ಶ್ರೀ ವಾಟಾಳ್ ನಾಗರಾಜ್.—ಬೆಳಗಾಂನಿಂದ ಜನರು ಬಂದಿದ್ದಾರೆಂದು ನಾನು ಹೇಳಿದ್ದು.

ಅಧ್ಯಕ್ಷರು. —ತಾವು ಹೇಳಿದ್ದು ಆಯಿತು ; ಬಿಡಿ ;

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ವಾಟಾಳ್ ನಾಗರಾಜ್ ಅವರು ಏನು ಹೇಳಿದ್ದರು ಎಂದರೆ ಅವರು ಬೆಳಗಾಂನಿಂದ ನಡೆದುಕೊಂಡು ಬಂದರು, ಬುತ್ತಿ ಹಿಡಿದುಕೊಂಡು ಬಂದರು, ಅವರೆಲ್ಲಿದ್ದ ಸ್ಫೂರ್ತಿ ಹೊರಗಡೆ ಬಂದಿದೆ ಎಂದು ಹೇಳಿದರು. ಆದರೆ ಇವರಲ್ಲಿ ಒಬ್ಬರೂ ಬೆಳಗಾಂನವರು ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಕಬ್ಬನ್ ಪಾರ್ಕಿನಲ್ಲಿ ಎಲ್ಲ ಬಂದು ಸೇರಿದ್ದಾರೆ. ಸುಮಾರು ೨ ಸಾವಿರ ಜನ ಬುತ್ತಿ ತೆಗೆದುಕೊಂಡು ಬಂದಿದ್ದಾರೆ. ಹೋಗಿ ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬರಲಿಲ್ಲವೆಂದು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನೀವು ವಿಷಯವನ್ನು ತಿರುಗಿಸಲು ಹೋಗಬೇಡಿ. ನಾನು ಆ ಪಟ್ಟಿಯ ಬಗ್ಗೆ ಹೇಳಲಿಲ್ಲ. ಬರೀ ಆರೋಪ ಮಾಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ —ಆದರೆ ತಾವು ಏನು ವಾದ ಮಾಡಿದ್ದೀರಿ, ಅದು ತರ್ಕಬದ್ಧವಾಗಿಲ್ಲ, ನಮ್ಮ ಕಡೆಯಿಂದ ಯಾರಿಗೋ ಒಂದು ಶಿಕ್ಷೆ ಮಾಡಬೇಕೆಂಬ ಉದ್ದೇಶ ಅಥವಾ ಯೋಜನೆ ಇಲ್ಲ. ಆದರೆ ಈ ಏನು ಒಂದು ಘಟನೆಯಾಗಿದೆ ಇದು ಈ ಸದನದಲ್ಲಿ ಎಲ್ಲರಿಗೂ ನೋವನ್ನು ಉಂಟು ಮಾಡಿದೆ. ಇದು ಇನ್ನು ಮುಂದೆ ನಡೆಯಬಾರದೆಂಬುದು ನಮ್ಮ ಉದ್ದೇಶ. ಕನ್ನಡದ ಅಭಿಮಾನ,

ನಮಗೆಲ್ಲರಿಗೂ ಇದೆ. ಕನ್ನಡದ ಧ್ವಜವನ್ನು ಇವತ್ತು ಬೆಳಗಾಂನಲ್ಲಿರತಕ್ಕ ಕನ್ನಡಿಗರು ಕೂಡ, ರಚನಾತ್ಮಕವಾಗಿ ಮೇಲಿತ್ತಬೇಕಾಗಿದೆ. ಬರೇ ಬಾಯಿ ಮಾತಿನಿಂದ ಕನ್ನಡಿಗರ ರಕ್ಷಣೆ ಬೆಳಗಾಂನಲ್ಲಿ ಆಗುವುದಿಲ್ಲ. ಅದನ್ನು ಮಾಡಬೇಕಾಗುತ್ತದೆ. ಆ ಕೆಲಸ ಇವತ್ತು ನಡೆಯಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಕೃತಿ ನೋಡುತ್ತಿದ್ದೇವೆ. ನಮ್ಮದು ಬರೇ ಬಾಯಿ ಮಾತು. ನಿಮ್ಮ ಕಾರ್ಯ ಏನೆಂಬುದನ್ನು ನಾವು ನೋಡುತ್ತಿದ್ದೇವೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಮಗೂ ಸಹ ಕನ್ನಡದ ಬಗ್ಗೆ ಬಹಳ ಅಭಿಮಾನವಿದೆ. ಇದನ್ನು ನಾನು ಹೆಚ್ಚು ಬೆಳೆಸಲು ಹೋಗುವುದಿಲ್ಲ. ಮಹಾಜನ್ ವರದಿಯ ಬಗ್ಗೆ ಸರ್ಕಾರದ ಅಭಿಪ್ರಾಯ ಸ್ಪಷ್ಟವಾಗಿದೆ. ಕನ್ನಡದ ಅಭಿಮಾನ ವಿಚಾರದಲ್ಲಿ ನಮ್ಮ ವಿಚಾರ ಸ್ಪಷ್ಟವಾಗಿದೆ. ಬೆಳಗಾಂನಲ್ಲಿ ಕನ್ನಡತನ ಬೆಳೆಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಮಹಾಜನ್ ವರದಿಯ ವಿಷಯದ ಬಗ್ಗೆ ಈಗ ಮಾತನಾಡುತ್ತಿಲ್ಲ. ಆ ಚರ್ಚೆ ಈಗ ಇಲ್ಲಿ ಬಂದಿಲ್ಲ. ಈಗ ಇಲ್ಲಿ ಬಂದಿರುವುದೇ ಬೇರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದ್ದರಿಂದ ಈ ನಿರ್ಣಯ ಏನು ಮಾಡಿದ್ದೇವೆ. ಅದನ್ನು ಇವತ್ತು ಸಂಜೆಯವರೆಗೆ ಮಾತ್ರ ಅವರಿಗೆ ಶಿಕ್ಷೆಯನ್ನು ಮಿತಿಗೊಳಿಸಲು ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದ್ದರಿಂದ ಆ ನಿರ್ಣಯವನ್ನು ನಾವು ತಿದ್ದುಪಡಿ ಮಾಡುತ್ತಿದ್ದೇವೆ. ಆದರೆ ಇನ್ನು ಮುಂದೆ ಈ ರೀತಿಯ ವರ್ತನೆ ಆಗದ ಹಾಗೆ ಸಂಪೂರ್ಣವಾಗಿ ಒಂದು ಖಂಡನೆಯನ್ನು ಇಡೀ ಸದನ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಹಾಗೆ ಈ ಸದನದ ಗೌರವವನ್ನು ಕಾಪಾಡತಕ್ಕದ್ದು ಎಲ್ಲರ ಕರ್ತವ್ಯ ಈ ಸದನಕ್ಕೆ ಗೌರವವನ್ನು ಕೊಡಬೆ ಕು. ಯಾರು ತಪ್ಪಿತಸ್ಥರಿದ್ದಾರೆ, ಅವರ ಬಗ್ಗೆ ಯಾರೂ ಮಾತನಾಡಿಲ್ಲ. ಈ ಸಭೆಯ ಗೌರವವನ್ನು ಹಾಗೂ ಈ ರಾಜ್ಯದ ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದರೆ ಇಲ್ಲಿ ಒಂದು ಮಾತನ್ನು ಹೇಳುತ್ತೇನೆ. ಅವರು ಬುದ್ಧಿ ಪೂರ್ವಕವಾಗಿ ಇದನ್ನು ಮಾಡಿದ್ದಲ್ಲವೆಂದು ಎಲ್ಲರೂ ಹೇಳಿದ್ದಾರೆ. ಆದ್ದರಿಂದ ಈ ಸದನ ಇಪ್ಪೊತ್ತು ಮುಕ್ತಾಯವಾಗುವವರೆಗೆ ಅವರಿಗೆ ಶಿಕ್ಷೆ ಕೊಡತಕ್ಕದ್ದು ಸೂಕ್ತವಾಗಿದೆ. ಎಂದು ನಾನು ಹೇಳುತ್ತೇನೆ. ಈ ತಿದ್ದುಪಡಿ ನಿರ್ಣಯವನ್ನು ಪಾಸ್ ಮಾಡಬಹುದು.

ಶ್ರೀ ಎಂ. ಪಿ. ವೆಂಕಟೇಶ್,—ಈ ದಿನದ ಸಭೆ ಮುಕ್ತಾಯವಾಗುವವರೆಗೆ ಅವರಿಗೆ ಶಿಕ್ಷೆ ಕೊಟ್ಟರೆ ಸಾಕು. ಅದು ಸೂಕ್ತವಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ಅನಿಸಿಕೆಗಳನ್ನು ನಾನು ಕೇಳಿದ್ದೇನೆ. ಅವರು ಯುವಕರು. ಅವರಿಗೆ ಉತ್ಸಾಹ, ಆವೇಶ ಎರಡೂ ಜಾಸ್ತಿ. ಆದುದರಿಂದ ಆ ಆವೇಶದ ಭರದಲ್ಲಿ ಅವರು ತಮ್ಮ ಅತಿರೇಕ ವರ್ತನೆಯಿಂದ ಈ ಸಭೆಗೆ ಅವಮಾನ ಮಾಡಿದ್ದಾರೆ. ಈ ಸಭೆಯ ಘನತೆಗೆ ಅವರು ಧಕ್ಕೆ ತಂದಿದ್ದಾರೆ. ಅದನ್ನು ತಾವೆಲ್ಲರೂ ಖಂಡಿಸುತ್ತೀರಿ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಜೊತೆಗೆ ಮಾನ್ಯ ಸದಸ್ಯರೊಬ್ಬರು ಇದು ಕನ್ನಡದ ಅಭಿಮಾನ ಎಂದು ಹೇಳಿದರು. ಇವತ್ತು ಕನ್ನಡದ ಅಭಿಮಾನ, ನಾಳೆ ಇನ್ಯಾವುದೋ ಒಂದು ಭ್ರಷ್ಟಾಚಾರದ ಅಭಿಮಾನ, ಮತ್ತೊಬ್ಬರಿಗೆ ಅವರ ಊರಿನಲ್ಲಿ ಅವರ ಕೆಲಸ ಆಗಲಿಲ್ಲ ಎನ್ನತಕ್ಕಂಥ ಹೊಟ್ಟೆನೋವು ಎಂಬ ಕಾರಣದಿಂದ ಏನು ಬೇಕಾದರೂ ಪ್ರೇಕ್ಷಕರ ಗ್ಯಾಲರಿಯಲ್ಲಿ ಮಾಡಬಹುದು ಅಂದರೆ ಎಲ್ಲಿಯವರೆಗೆ ಗೆರೆಯನ್ನು ಎಳೆಯುತ್ತೀರಿ ? ನಾನು ಅಧ್ಯಕ್ಷನಾದ ಮೇಲೆ ಇದು ಎರಡನೇ ಸಾರಿ ನಡೆಯುತ್ತಿರುವುದು. ಪ್ರೇಕ್ಷಕರ ಗ್ಯಾಲರಿಯಿಂದ ಕರಪತ್ರಗಳನ್ನು ಎಸೆಯತಕ್ಕಂಥದ್ದು ಕೆಲವು ದಿವಸಗಳ ಕೆಳಗೆ ಏನೊಂದು ಘಟನೆ ನಡೆಯಿತು. ಆ ಘಟನೆಯನ್ನು ನಾವು ತೀವ್ರತರವಾಗಿ ಗಮನಿಸಲಿಲ್ಲ. ಈ ದಿವಸ ಹತ್ತಾರು ಜನ ಸೇರಿ ಇಂಥದ್ದೇ ಕೃತ್ಯವನ್ನು ಮಾಡಿದಾಗ ಮಾನ್ಯ ಸದಸ್ಯರುಗಳು ಇದರ ಬಗ್ಗೆ ತೀವ್ರತರವಾಗಿ ನಾವು ಆಲೋಚನೆ ಮಾಡಬೇಕು, ಎಂದು ಹೇಳಿ ಅಭಿಪ್ರಾಯಪಟ್ಟರು. ಈ ಅಭಿಪ್ರಾಯಕ್ಕೆ ಅನುಗುಣವಾಗಿ ನಾವು ಈ ವಿಚಾರವನ್ನು ಸಭೆಯ ಮುಂದೆ ಮಂಡಿಸಿದ್ದೇವೆ. ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಇದರ ಬಗ್ಗೆ ಈಗಾಗಲೇ ಅವರಿಗೆ ಸಾಕಾದಷ್ಟು ಶಿಕ್ಷೆಯಾಗಿದೆ ಮತ್ತು ಅವರಿಗೆ ಸಾಕಾದಷ್ಟು ಸಂಧಾರಣೆ ಮಾನಸಿಕವಾಗಿ ಅವರಿಗೆ ಆಗಿದೆ ಎಂದು ಹೇಳಿದರು. ಆ ಅಭಿಪ್ರಾಯ ನಿಮ್ಮದಾಗಿದ್ದರೆ ಅದಕ್ಕೆ ಅಡ್ಡಿ ಬರತಕ್ಕಂಥವನು ನಾನಲ್ಲ. ಆದುದರಿಂದ ಇವತ್ತು ಅವರು ರಾತ್ರಿ ಒಂಭತ್ತು ಗಂಟೆಯವರೆಗೆ ಅವರು

ಹೇಗೆ ಎಲ್ಲಿದ್ದಾರೋ ಅಲ್ಲಿಯೇ ಇಟ್ಟಿದ್ದು ಆ ನಂತರ ಅವರನ್ನು ಬಿಡುಗಡೆ ಮಾಡುತ್ತಾರೆ. ಆದರೆ ಮಾನ್ಯ ಸದಸ್ಯರೆಲ್ಲರೂ ಕೂಡಾ ಇನ್ನು ಮೇಲೆ ತಾವು ಯಾರಿಗಾದರೂ ತಮ್ಮ ಹಸ್ತಾಕ್ಷರವನ್ನು ಕೊಡುತ್ತೀರಿ, ಗ್ಯಾಲರಿ ಪಾಸನ್ನು ಕೊಡುತ್ತೀರಿ, ಅವರ ಮೇಲೆ ದಯವಿಟ್ಟು ಗಮನ ಇಡಬೇಕೆ. ಏಕೆಂದರೆ, ನಿಮ್ಮ ಕಾರ್ಯಭಾರದ ಮಧ್ಯೆ ಯಾರೋ ಬರುತ್ತಾರೆ, ಯಾರೋ ಬಂದು ಕೇಳುತ್ತಾರೆ, ಆಗ ಅದನ್ನು ನೀವು ಕೊಟ್ಟುಬಿಡುತ್ತೀರಿ. ಇನ್ನು ಮುಂದೆ ಇದರ ಮೇಲೆ ಸ್ವಲ್ಪ ಗಮನವನ್ನು ಹರಿಸಿದರೆ ಇಂಥ ಘಟನೆಗಳು ಮತ್ತೆ ಮರುಕಳಿಸದಂತೆ ಆಗುತ್ತದೆ ಎನ್ನುತಕ್ಕಂಥ ಸೂಚನೆಯನ್ನು ಮಾತ್ರ ಕೊಟ್ಟು ಈ ದಿವಸ ಅವರಿಗೆ ಎಚ್ಚರಿಕೆಯನ್ನು ಕೊಟ್ಟು ರಾತ್ರಿ ಒಂಭತ್ತು ಗಂಟೆಯ ಮೇಲೆ ಅವರನ್ನು ಬಿಡುಗಡೆ ಮಾಡುತ್ತಾರೆ. ನಾಳೆ ಸದನ ಮುಂದುವರಿಯುತ್ತದೆ. ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಸೇರಿ ೧೧ ಗಂಟೆಯವರೆಗೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆಯನ್ನು ಮಾಡಿ ೧೧ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ಉತ್ತರವನ್ನು ಕೊಡುತ್ತಾರೆ. ಆ ನಂತರ ಎರಡೂ–ಮೂರು ಗಮನ ಸೆಳೆಯುವ ಸೂಚನೆಗಳು ಇವೆ. ಗಮನ ಸೆಳೆಯುವ ಸೂಚನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರವನ್ನು ಕೊಟ್ಟಾದ ಮೇಲೆ ತೆಗೆದು ಕೊಳ್ಳೋಣ. ಈಗ ಸಭೆಯು ಮುಂದುವರಿದು ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಮತ್ತೆ ಇಲ್ಲಿ ಸೇರುತ್ತದೆ.

(ಸದನವು ೬–೫೩ ಗಂಟೆಗೆ ಮುಕ್ತಾಯಗೊಂಡು ಮತ್ತೆ ದಿನಾಂಕ ೪–೪–೧೯೯೦ರಂದು ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)